# ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

## ಸಾಂಸ್ಥಿಕ ರಚನೆ

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಸಾಮಾನ್ಯ ಮಂಡಳಿ**

ಅಧ್ಯಕ್ಷರು: ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು

↓

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಆಡಳಿತ ಮಂಡಳಿ**

ಅಧ್ಯಕ್ಷರು: ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

↓

ಮುಖ್ಯ ಮೌಲ್ಯಮಾಪನಾಧಿಕಾರಿಗಳು
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

→ ಆಪ್ತ ಕಾರ್ಯದರ್ಶಿ
ವೆಬ್ ಮ್ಯಾನೇಜರ್
ಕಚೇರಿ ಸಹಾಯಕ

↓

ಹೆಚ್ಚುವರಿ ಮುಖ್ಯ ಮೌಲ್ಯಮಾಪನಾಧಿಕಾರಿಗಳು

↓

ಆಡಳಿತ ವಿಭಾಗ

↓

ಆಡಳಿತಾಧಿಕಾರಿ
ಲೆಕ್ಕಾಧಿಕಾರಿ
ಪೀಠಾಧಿಕಾರಿ
ಡಿಟಿಪಿ ಆಪರೇಟರ್
ದಲಾಯತ್‌ಗಳು

ಕಾರ್ಯಕಾರಿ ಘಟಕಗಳು
ಕಾರ್ಯಕ್ರಮ ವಿಭಾಗ

↓

ಸಹ ನಿರ್ದೇಶಕರು
ಸಮಾಲೋಚಕರು
ಸಂಶೋಧನಾ ಸಹೋದ್ಯೋಗಿಗಳು
ಕಛೇರಿ ಸಹಾಯಕರು
ವಾಹನ ಚಾಲಕರು
ದಲಾಯತ್‌ಗಳು

4(1)(ಬಿ)

**4(1)(ಬಿ)iii ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ವಾಹಿನಿಗಳೂ ಸೇರಿದಂತೆ ನಿರ್ಣಯ ಮಾಡುವ ಪ್ರಕ್ರಿಯೆಯಲ್ಲಿ ಅನುಸರಿಸಿದ ಕಾರ್ಯವಿಧಾನ:**

ಹಣಕಾಸು ಪ್ರಕರಣಗಳಿಗೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ಲೆಕ್ಕಾಧಿಕಾರಿಯವರು ಪರಿಶೀಲಿಸುತ್ತಾರೆ. ಆಡಳಿತಾಧಿಕಾರಿಯವರು ಈ ಪ್ರಸ್ತಾವನೆಗಳನ್ನು ಪರಿಶೀಲನೆ ಮಾಡುತ್ತಾರೆ ಮತ್ತು ಮುಖ್ಯ ಮೌಲ್ಯಮಾಪನಾಧಿಕಾರಿಗಳ ಅನುಮೋದನೆಗಾಗಿ ಸಲ್ಲಿಸುತ್ತಾರೆ. ಇದೇ ರೀತಿಯಲ್ಲಿ, ಆಡಳಿತಾತ್ಮಕ ಪ್ರಸ್ತಾವನೆಗಳನ್ನು ಆಡಳಿತಾಧಿಕಾರಿಯವರು ಕಛೇರಿ ಸಹಾಯಕರ ಸಹಾಯದಿಂದ ಪರಿಶೀಲನೆ ಮಾಡುತ್ತಾರೆ ಮತ್ತು ಇವುಗಳನ್ನು ಮುಖ್ಯ ಮೌಲ್ಯಮಾಪನಾಧಿಕಾರಿಗಳ ಅನುಮೋದನೆಗಾಗಿ ಸಲ್ಲಿಸುತ್ತಾರೆ.

ಖರೀದಿಗೆ ಸಂಬಂಧಿಸಿದ ಎಲ್ಲಾ ಕಡತಗಳನ್ನು ಸಮಾಲೋಚಕರಿಂದ(ಖರೀದಿ) ಪ್ರಕ್ರಿಯೆಗೆ ಒಳಪಡಿಸಲಾಗುತ್ತದೆ ಮತ್ತು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮಾರ್ಗಸೂಚಿಗಳಿಗೆ ಅನುಗುಣವಾಗಿ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳಲು ಆಡಳಿತಾಧಿಕಾರಿಯವರ ಮೂಲಕವಾಗಿ ಮುಖ್ಯ ಮೌಲ್ಯಮಾಪನಾಧಿಕಾರಿಯವರಿಗೆ ಸಲ್ಲಿಸಲಾಗುತ್ತದೆ. ಸಮಾಲೋಚಕರು (ಮೌಲ್ಯಮಾಪನ) ಇವರು, ಕೇಂದ್ರೀಯ ಪ್ರಾಯೋಜಿತ ಯೋಜನೆಗಳು ಸೇರಿದಂತೆ, ಎಲ್ಲಾ ಯೋಜನೆಗಳ/ಕಾರ್ಯಕ್ರಮಗಳನ್ನು ಪರಿಶೀಲಿಸಿ ಉಲ್ಲೇಖ ನಿಯಮಗಳನ್ನು ತಯಾರಿಸುತ್ತಾರೆ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಸುಸ್ಥಿರ ಅಭಿವೃದ್ಧಿ ಗುರಿಗಳ ಕಾರ್ಯಕ್ರಮಗಳು ಸೇರಿದಂತೆ, ಸರ್ಕಾರದ ವಿವಿಧ ಇಲಾಖೆಗಳು, ಸಾರ್ವಜನಿಕ ವಲಯಗಳ ಸಂಸ್ಥೆಗಳು, ನಿಗಮ ಮಂಡಳಿಗಳು ಮತ್ತು ಇತರೆ ಸಂಸ್ಥೆಗಳು ಅನುಷ್ಠಾನಗೊಳಿಸಿದ ವಿಶೇಷ ಅಭಿವೃದ್ಧಿ ಯೋಜನೆಗಳ ಮೌಲ್ಯಮಾಪನ ಅಧ್ಯಯನವನ್ನು ಕೈಗೊಳ್ಳುತ್ತದೆ.

**4(1)(ಬಿ)iv ಅವುಗಳ ಕಾರ್ಯಚಟುವಟಿಕೆಗಳ ನಿರ್ವಹಣೆಗಾಗಿ ನಿಗದಿಪಡಿಸಲಾದ ಮಾನದಂಡಗಳು:**

ಸರ್ಕಾರದ ಆದೇಶ ಸಂಖ್ಯೆ: ಪಿಡಿ 20 ಇವಿಎನ್ 2011 ದಿ: 05-09-2011 ಅನುಸಾರವಾಗಿ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಉಪನಿಯಮಗಳು (ಬೈಲಾಗಳು) ಅನುಮೋದನೆಯಾಗಿರುತ್ತದೆ ಮತ್ತು ಈ ಪ್ರಾಧಿಕಾರವು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರಡಿ ಸಂಘವಾಗಿ ದಿ: 19-09-2011ರಂದು ನೋಂದಾಯಿಸಲ್ಪಟ್ಟಿರುತ್ತದೆ. ಕರ್ನಾಟಕ ರಾಜ್ಯ ಮೌಲ್ಯಮಾಪನ ನೀತಿ ಮತ್ತು ನಿಯಮಗಳನ್ನು ದೈನಂದಿನ ಆಡಳಿತಕ್ಕೆ ಅನುಸರಿಸಲಾಗುತ್ತಿದೆ.

ಸರ್ಕಾರದ ಆದೇಶ ಸಂಖ್ಯೆ: ಪಿಡಿ 194 ಎಸ್‌ಎಸ್ಎಂ 2012 ದಿ: 31-12-2012ರ ಪ್ರಕಾರ, ಸರ್ವೆಸಾಮಾನ್ಯವಾಗಿ ಸಾಮಾನ್ಯ ಆರ್ಥಿಕ ಅಧಿಕಾರಗಳ ನಿಯೋಜನೆಗಳನ್ನು ಮತ್ತು ಸರ್ಕಾರದ ಆದೇಶ ಸಂಖ್ಯೆ: ಪಿಡಿ 21 ಎಸ್ಎಂಸಿ 2013 ದಿ: 08-03-2013ರ ಪ್ರಕಾರ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಅಧಿಕಾರಿಗಳಿಗೆ ಆಡಳಿತಾತ್ಮಕ ಅಧಿಕಾರಗಳನ್ನು ನಿಯೋಜಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಪಿಡಿ 23 ಪಿಎಸ್‌ಡಿ 2014 ದಿ: 11-04-2014ರಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಈ ಕೆಳಗಿನ ನಾಲ್ಕು ಕೈಪಿಡಿಗಳಿಗೆ ಅನುಮೋದನೆಯನ್ನು ನೀಡಿರುತ್ತದೆ.

- ಮಾನವ ಸಂಪನ್ಮೂಲ ಕೈಪಿಡಿ.
- ಆರ್ಥಿಕ ಮತ್ತು ಲೆಕ್ಕಪತ್ರಗಳ ಕೈಪಿಡಿ.
- ದಾಖಲಿತ ಪಟ್ಟಿಯ ಕೈಪಿಡಿ.(ಎಂಪನೆಲ್‌ಮೆಂಟ್ ಮಾನ್ಯುಯಲ್)
- ಫಲಿತಾಂಶ ಶ್ರೇಣೀಕರಣ ಕೈಪಿಡಿ.

**4(1)(ಬಿ)v ಅದರ ನಿಯಂತ್ರಣದಲ್ಲಿರುವ ಅಥವಾ ಅದರ ನೌಕರರು ಹಲವಾರು ಕಾರ್ಯಗಳನ್ನು ನಿರ್ವಹಿಸುವಾಗ ಬಳಸುತ್ತಿರುವ ನೀತಿಗಳು, ನಿಯಮಗಳು, ನಿಯಂತ್ರಣಗಳು, ಸೂಚನೆಗಳು, ಪ್ರಕ್ರಿಯೆಗಳು ಮತ್ತು ದಾಖಲೆಗಳು, ಇತ್ಯಾದಿಗಳು:**

ಮೇಲೆ ತಿಳಿಸಿದಂತೆಯೇ ಇರುತ್ತದೆ.

**4(1)(ಬಿ) vi ಅದು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ದಾಖಲೆಗಳ ವರ್ಗಗಳ ಒಂದು ವಿವರಣಾ ಪಟ್ಟಿ:**

ಸಮಾಲೋಚಕ ಸಂಸ್ಥೆಗಳ ದಾಖಲಿತ ಪಟ್ಟಿಗೆ(ಎಂಪನೆಲ್‌ಮೆಂಟ್) ಸಂಬಂಧಿಸಿದ ಎಲ್ಲಾ ದಾಖಲೆಗಳು, ಸಂಸ್ಥೆಗಳೊಂದಿಗೆ ಮಾಡಿಕೊಂಡ ಒಪ್ಪಂದಗಳು, ಸಮಾಲೋಚಕ ಸಂಸ್ಥೆಗಳು ಸಲ್ಲಿಸಿದ ಬ್ಯಾಂಕ್ ಖಾತರಿಗಳು, ಯೋಜನೆಗಳ ಮೌಲ್ಯಮಾಪನಕ್ಕಾಗಿ ಹಿತಾಸಕ್ತಿಗಾಗಿ ಕರೆ ನೀಡಲು ಸಂಬಂಧಿಸಿದ ಸೇವೆಗಳು ಮತ್ತು ಕಛೇರಿ ಉಪಕರಣಗಳ ಸಂಗ್ರಹಣೆಗಾಗಿ ಟೆಂಡರ್ ದಾಖಲೆಗಳು ಅದರ ನಿಯಂತ್ರಣದಲ್ಲಿವೆ.